IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಜಂಬಣ್ಣ ಅಮರಚಿಂತರ ಕಾದಂಬರಿ : ಶೋಷಣೆ ಸಂಘರ್ಷ

## (ಕುರುಮಯ್ಯ ಮತ್ತು ಅಂಕುಶದೊಡ್ಡಿ ಅನುಲಕ್ಷಿಸಿ)

**ಡಾ.ಮುಮ್ತಾಜ್‌ಬೇಗಂ ಗಂಗಾವತಿ**

ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಕನ್ನಡ ವಿಭಾಗ

ಎಸ್.ಕೆ.ಎನ್.ಜಿ. ಸರ್ಕಾರಿ ಪ್ರಥಮದರ್ಜೆ ಕಾಲೇಜು, ಗಂಗಾವತಿ.

ಜಿಲ್ಲಾ ಕೊಪ್ಪಳ. ಮೊ:೯೮೪೬೬೬೦೭೫

ಕುರುಮಯ್ಯ ಮತ್ತು ಅಂಕುಶದೊಡ್ಡಿ ಕಾದಂಬರಿಯನ್ನು 'ಬಿಸಿಲು ನಾಡು' ರಾಯಚೂರು ಜಿಲ್ಲೆಯ ವಿಶಿಷ್ಟ ಪ್ರತಿಭೆ. ಕವಿ, ವಿಮರ್ಶಕ, ಬರಹಗಾರ, ಸೃಜನಶೀಲ ಮನಸ್ಸುಳ್ಳ ಬಹುಮುಖ ಪ್ರತಿಭೆಯಾದ ಜಂಬಣ್ಣ ಅಮರಚಿಂತರು ಬರೆದಿದ್ದಾರೆ. ಈ ಕಾದಂಬರಿಯಲ್ಲಿ ಕೊರವ ಸಮುದಾಯದ ಸಾಂಸ್ಕೃತಿಕ ಬದುಕನ್ನು ವಾಸ್ತವದ ನೆಲೆಗಟ್ಟಿನಲ್ಲಿ ಕಟ್ಟಿಕೊಡುವ ಪ್ರಯತ್ನವನ್ನು ಕಾದಂಬರಿಕಾರ ಅಮರಚಿಂತರು ಮಾಡಿದ್ದಾರೆ.

ಅಂಕುಶದೊಡ್ಡಿ ಎನ್ನುವುದೊಂದು ಪ್ರದೇಶದ ಹೆಸರು. ಮೊದಲು ಲಮಾಣಿಗಳೂ ವಾಸವಾಗಿದ್ದು ಅವರು ಬೇರೆಡೆಗೆ ವಲಸೆ ಹೋದ ನಂತರ ಅಂಕುಶದೊಡ್ಡಿ ತಾಂಡೆಯಲ್ಲಿ ಕೊರವರು ವಾಸಿಸತೊಡಗಿದರು. ಕೊರವರ ವಸತಿ ವ್ಯವಸ್ಥೆಯ ನೈಜ ಚಿತ್ರಣವನ್ನು ಚಿತ್ರಿಸುವುದರ ಮೂಲಕ ಕಾದಂಬರಿ ಪ್ರಾರಂಭವಾಗುವುದು.

ಕುರುಮಯ್ಯ ಕಾದಂಬರಿಯ ನಾಯಕ ಪಾತ್ರ ಕೊರವ ಹಾಗೂ ಸಮುದಾಯದ ಹಿರಿಯ ಜೀವಿ. ಸಮಾಜದಲ್ಲಿ ಕೆಳವರ್ಗವನ್ನು ನೋಡುವ ರೀತಿ, ದುಡಿಸಿಕೊಳ್ಳುವ ಪರಿಯನ್ನು ತುಂಬಾ ಮನೋಜ್ಞವಾಗಿ ಕಾದಂಬರಿಯಲ್ಲಿ ವಿಶ್ಲೇಷಿಸಿದ್ದಾರೆ.

ಕೆಳ ಸಮುದಾಯಗಳ ಸಾಮಾಜಿಕ ವ್ಯವಸ್ಥೆಯ ಸಂದರ್ಭದಲ್ಲಿ ಅನೈತಿಕ ಸಂಬಂಧಗಳ ವಿಷಯಗಳು ಸಹಜವಾಗಿ ಉಸಿರಾಡುತ್ತಿರುತ್ತವೆ. ಪಕ್ಕದ ಮನೆಯ ಜಂಭಯ್ಯನಿಗೆ ಮಾರಪ್ಪನ ಹೆಂಡತಿ ಬುಡ್ಡಮ್ಮನ ಮೇಲೆ ಆಕರ್ಷಣೆ ಉಂಟಾಗುವುದು. ಅನೈತಿಕವಾಗಿ ಲೈಂಗಿಕ ಪ್ರಕ್ರಿಯೆಯಲ್ಲಿ ತೊಡಗಿದಾಗ ಜನರ ಕಣ್ಣಿಗೆ ಬಿದ್ದು ಕೊರವರ ಪಂಚಾಯಿತಿಯವರೆಗೆ ಹೋಗುವುದು. ಬುಡ್ಡಮ್ಮನನ್ನು ಮುಟ್ಟಿದ ಜಂಭಯ್ಯ ಎರಡು ನೂರು ರೂಪಾಯಿಗಳನ್ನು ಮೊದಲ ಗಂಡ ಮಾರಪ್ಪನಿಗೆ ಕೊಟ್ಟು ಮದುವೆ ಮಾಡಿಕೊಳ್ಳಬೇಕೆಂಬ ತೀರ್ಮಾನವಾಗುತ್ತದೆ. ಹೆಣ್ಣನ್ನು ಮಾರುವ ಮತ್ತು ಕೊಳ್ಳುವ ಪದ್ಧತಿ ತೀರಾ ಸಹಜ ಎನ್ನುವಂತೆ ಕಾಣುತ್ತೇವೆ. ಹೆಣ್ಣಿನ ಅಸ್ತಿತ್ವದ ಪ್ರಶ್ನೆ ಬಂದಾಗ ಪುರುಷನ ಅಡಿಯಾಳಾಗೆ ಕಾಣುವ ಪ್ರವೃತ್ತಿಯನ್ನು ಕಾಣುತ್ತೇವೆ. ಹೆಣ್ಣನ್ನು ಭೋಗದ ವಸ್ತುವಾಗಿ ನೋಡುವ ಮಾರುಕಟ್ಟೆಯ ವಸ್ತುವಿನ ಹಾಗೆ ಆಕೆಯ ಬದುಕನ್ನು ಮಾರುಕಟ್ಟೆಯ ವ್ಯಾಪಾರವಾಗಿ ಪರಿಭಾವಿಸುವ ದುರಂತದ ಕತೆಯನ್ನು ಕಾದಂಬರಿ ಚಿತ್ರಿಸುತ್ತದೆ.

ಮದುವೆಗೆ ಸಾಲಮಾಡಿದ ಜಂಭಯ್ಯ ಸಾಲ ತೀರಿಸಲು ಕೋಳಿ ಪಂದ್ಯವಾಡಿ ಸೋತಾಗ ಬುಡ್ಡಮ್ಮನ ಕಾಲ್ಗುಣ ಸರಿಯಿಲ್ಲವೆಂದು ಹೀಯಾಳಿಸುವುದು. ಅತ್ತೆ ಸೊಸೆ ಜಗಳ ಹೀಗೆ ಸಹಜ ಎನ್ನುವಷ್ಟು ಕಾದಂಬರಿಕಾರ ಪಾತ್ರಗಳಿಗೆ ಸಂಭಾಷಣೆ ಮುಖಾಂತರ ಜೀವ ತುಂಬುತ್ತಾ ಶೋಷಣೆಯ ವಿವಿಧ ಸ್ತರಗಳನ್ನು ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ. ಹೆಣ್ಣಿನ ಮನಸ್ಸಿನ ತಲ್ಲಣ, ತಳಮಳಗಳನ್ನು ಬುಡ್ಡಮ್ಮನ ಪಾತ್ರದ ಮೂಲಕ ಕಾದಂಬರಿಕಾರ ತುಂಬಾ ಮನೋಜ್ಞವಾಗಿ ಚಿತ್ರಿಸಿದ್ದಾರೆ. ಇಲ್ಲಿ ಜಂಭಯ್ಯನಿಗಿಂತ ಬುಡ್ಡಮ್ಮನ ಪಾತ್ರ ತನ್ನ ಮೊದಲ ಗಂಡನ ಮಗುವನ್ನು ಮರೆಯಲಾಗದೇ ಒದ್ದಾಡುವ ತಳಮಳ ಮತ್ತು ದೇಹದ ಹಸಿವು ಮಾನವ ಸಹಜವಾದರೂ ಅದರ ದುಷ್ಪರಿಣಾಮಗಳನ್ನು ಮಾತ್ರ ಹೆಣ್ಣು ಅನುಭವಿಸುವ ಸ್ಥಿತಿಯನ್ನು ಬುಡ್ಡಮ್ಮನ ಪಾತ್ರ ನೆನಪಿಸುತ್ತದೆ. ತಾಯ್ತನದ ಸೆಳೆತ ಮತ್ತು ಹೊಸ ಗಂಡನ ಮಾನಸಿಕ ಹಿಂಸೆಯ ಮಧ್ಯೆ ತೊಳಲಾಡುವ ಅಸಹಾಯಕ ಸ್ಥಿತಿಯಲ್ಲಿ ಬದುಕು ಸವೆಸುವ ಅನಿವಾರ್ಯತೆಯನ್ನು ಧಿಕ್ಕರಿಸಿ ಸಾವಿನ ಬಾಗಿಲನ್ನು ತಟ್ಟುವ ದುರಂತವನ್ನು ಕಾಣುತ್ತೇವೆ.

ತಾಯೇರಿಯನ್ನು ಆಕೆಯ ಮಾವ ಬುಡ್ಡಪ್ಪ ಇಷ್ಟಪಟ್ಟು ಮದುವೆ ಮಾಡಿಕೊಳ್ಳಬೇಕೆಂದು ಕೊಂಡಿರುತ್ತಾನೆ. ಆದರೆ ತಾಯೇರಿ ತಂದೆ ತಾಯಿ ಬುಡ್ಡಪ್ಪ ಕಳ್ಳತನ ಮಾಡುವನು, ಸ್ಥಿತಿವಂತನಲ್ಲನೆಂಬ ಕಾರಣಕ್ಕೆ ಮದುವೆ ಮಾಡಿಕೊಡಲು ವಿರೋಧಿಸುತ್ತಾರೆ. ಅದಕ್ಕಾಗಿ ದುಡ್ಡಿರುವ ಮುದುಕ ತಾಯಪ್ಪನೊಂದಿಗೆ ತಾಯೇರಿಯ ಮದುವೆಯನ್ನು ನಿಶ್ಚಯಿಸುತ್ತಾರೆ.

ಕೆಂಚ ಮಾರಮ್ಮನ ಜಾತ್ರೆಯಲ್ಲಿ ಬುಡ್ಡಪ್ಪ ದೇವರು ಬಂದಂತೆ ನಟಿಸಿ ತಾಯೇರಿಗೆ ತಾಳಕಟ್ಟಲು ಕೆಂಚ ಮಾರಮ್ಮನೆ ಅಪ್ಪಣೆ ಕೊಟ್ಟದ್ದಾಳೆಂಬ ಸನ್ನಿವೇಶವನ್ನು ಸೃಷ್ಟಿಸುತ್ತಾನೆ. ಕೊನೆಗೆ ಕೊರವ ಪಂಚಾಯಿತಿಯಲ್ಲಿ ಅವರನ್ನು ಜಾತಿಯಿಂದ ಬಹಿಷ್ಕರಿಸಲಾಗುತ್ತದೆ. ಮುದುಕನನ್ನು ಕಟ್ಟಿಕೊಂಡು ಜೀವನ ಪೂರ್ತಿ ಕೊರಗುವುದಕ್ಕಿಂತ ಬಹಿಷ್ಕಾರವನ್ನು ಎದುರಿಸುವುದೇ ಲೇಸೆಂದು ಬಗೆವ ತಾಯೇರಿಯ ಪಾತ್ರ ಪ್ರಗತಿಪರವಾದ ನಿಲುವುಗಳನ್ನು ಸೂಚಿಸಿದರೂ ಜಾತಿಯ, ಪದ್ಧತಿಯ ಹೆಸರಿನಲ್ಲಿ ಶೋಷಣೆಗಳು ನಿರಂತರವಾಗಿವೆ ಎಂಬುದನ್ನು ಕಾದಂಬರಿಕಾರ ತೀಕ್ಷ್ಣವಾಗಿ ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ.

ಕುರುಮಯ್ಯನ ಮಗ ಮಾರಿಗ ಕ್ರೈಸ್ತರ ಹುಡುಗಿಯ ಜೊತೆ ಮದುವೆಯಾಗಿ ಬಾಂಬೆಗೆ ಹೋದ ಸುದ್ದಿಯಿಂದ ಕುರುಮಯ್ಯ ಜರ್ಜರಿತನಾದಾಗ ಅಲ್ಲಿಯ ಸಾಮಾನ್ಯರ ಓದಿನ ಬಗೆಗಿನ ತಿಳುವಳಿಕೆಯನ್ನು ಕಾದಂಬರಿಕಾರ ಪಾತ್ರಗಳ ಮೂಲಕ ಹೀಗೆ ಹೇಳಸುತ್ತಾನೆ. 'ನಾಲ್ಕು ಅಕ್ಷರ ಕಲಿತರೆ ನಾವು ಬ್ರಾಹ್ಮಣರು ಕೊರವರಲ್ಲ ಎನ್ನುವರು ನಮ್ಮ ಜನರು' ಎನ್ನುವಲ್ಲಿ ಓದಿನ ಬಗೆಗಿನ ತಳ ಸಮುದಾಯದ ಗ್ರಹಿಕೆಗಳು ಮತ್ತು ಅಕ್ಷರ ಜ್ಞಾನದ ತಿಳುವಳಿಕೆಯ ಹಿನ್ನಲೆಯಲ್ಲಾಗುವ ಬದಲಾವಣೆಗಳನ್ನು ಕಾದಂಬರಿ ಹಿಡಿದಿಡುವುದರ ಮೂಲಕ ಪ್ರಗತಿಪರತೆಯ ಸೂಚನೆಗಳನ್ನು ಬಿಟ್ಟು ಕೊಡುತ್ತದೆ.

ಕೊರವರ ದೊಡ್ಡಿಯಲ್ಲಿ ನಡೆಯುವ ಜಗಳಗಳಲ್ಲಿ ಕೆಟ್ಟ ಪದಗಳ ಬಳಕೆ ತಳ ಸಮುದಾಯದ ಸಾಮಾಜಿಕ ಬದುಕಿನ ಭಾಗವೆನ್ನುವಂತೆ ಕಥಾ ಹಂದರ ಸಾಗುತ್ತದೆ. ಕೋಳಿ ಪಂದ್ಯದ ವರ್ಣನೆ, ಈಚಲ ಮರದ ಹೆಂಡ ಕದಿಯುವ ಪ್ರಸಂಗ, ಕೆಂಚಮಾರಮ್ಮ ದೇವಿ ಜಾತ್ರೆಯ ವರ್ಣನೆ, ಕೋಣ, ಕುರಿಗಳ ಬಲಿ, ಬೆತ್ತಲು ಸೇವೆ, ಗ್ಯಾನಪ್ಪ ತಾಯೇರಿಯ ಮಾನಭಂಗಕ್ಕೆ ಯತ್ನಿಸುವಿಕೆ, ಖಾಯಿಲೆ ಕಸಾಲೆಗಳನ್ನು ಎದುರಿಸುವ ರೀತಿ ಎಲ್ಲವೂ ಸಹಜ ಎನ್ನುವಷ್ಟು ನೈಜ ಬದುಕನ್ನು ಕಾದಂಬರಿಯಾಗಿ ಹೆಣೆಯುವಲ್ಲಿ ಕಾದಂಬರಿಕಾರ ಯಶಸ್ವಿಯಾಗಿದ್ದಾನೆ. ಇವು ಸಾಮಾಜಿಕ ಬದುಕಿನ ಭಾಗವಾಗಿ ಚಿತ್ರಿತವಾದರೂ ತಳ ಸಮುದಾಯದ ಶೋಷಣೆಯ ನೆಲೆಗಳನ್ನು ಸೂಕ್ಷ್ಮವಾಗಿ ಸಹೃದಯಿ ಓದುಗರ ಗ್ರಹಿಕೆಗೆ ನಿಲುಕಿವಂತೆ ಕಾದಂಬರಿಕಾರ ಮಾಡುತ್ತಾನೆ.  ಕಾದಂಬರಿಯಲ್ಲಿ ತಳಸಮುದಾಯದ ಸಾಮಾಜಿಕ ಬದುಕಿನ ವಿವಿಧ ಮಗ್ಗುಲುಗಳನ್ನು ಅನೇಕ ಸಣ್ಣ ಸಣ್ಣ ಸಂಗತಿಗಳ ಮೂಲಕ ತೆರೆದಿಡುವ ಪ್ರಯತ್ನವಿದೆ. ಈ ಕಾರಣಕ್ಕಾಗಿ ಕಾದಂಬರಿ ಮಾನವ ಶಾಸ್ತ್ರೀಯ ಮತ್ತು ಜನಪದ ಆಯಾಮಗಳವೆ.

ಜಮೀನದಾರಿಕೆ ಪದ್ಧತಿಯಲ್ಲಿ ದುಡಿಯುವ ವರ್ಗದ ಬವಣೆಯನ್ನು ಹಿಡಿದಿಡುವ ಕಾದಂಬರಿಕಾರ ಶ್ರಮಿಕ ವರ್ಗದ ಹಸಿವು ಸಂಕಟಗಳನ್ನು ಓದುಗನಿಗೆ ಮನಮುಟ್ಟುವಂತೆ ಕಟ್ಟಿ ಕೊಟ್ಟಿದ್ದಾರೆ. ಕುಶಾಲಪ್ಪ, ಸಂಶಾಲಪ್ಪ, ಯಂಕನಗೌಡ ರಂಥ ಮೇಲ್ವರ್ಗದ ವ್ಯಕ್ತಿಗಳು ಕೊರವರನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡು ನಂತರ ಅವರ ಬದುಕನ್ನು ಸಂಕಷ್ಟಕ್ಕೆ ಸಿಲುಕಿಸುವ ಮತ್ತು ಮೇಲ್ವರ್ಗದ ಕುತಂತ್ರಕ್ಕೆ ಬಲಿಯಾಗಿ ಅದರಿಂದ ಹೊರ ಬರಲಾಗದೆ ಕೆಳವರ್ಗವೊಂದು ದುರಂತ ಅಂತ್ಯವನ್ನು ಕಾಣುವ ಚಿತ್ರಣ ಮನಮುಟ್ಟುತ್ತದೆ.

ಕೊರವರೊಂದಿಗೆ ಕುಶಾಲಪ್ಪ ಹಂದಿಗೊಬ್ಬರದ ವ್ಯವಹಾರವನು ಮಾಡುತ್ತಿದ್ದ ಮೇಲ್ವರ್ಗದ ವ್ಯಕ್ತಿ. ಕಡಿಮೆ ಬೆಲೆಗೆ ಕೊರವರಲ್ಲಿ ಹಂದಿಗೊಬ್ಬರವನ್ನು ತೆಗೆದುಕೊಂಡು ಹೋಗಿ, ಹೆಚ್ಚಿನ ಬೆಲೆಗೆ ಮಾರಾಟಮಾಡುತ್ತಿದ್ದ. ಕೊರವರಿಗೆ ಹಂದಿಗೊಬ್ಬರ , ಪುಟ್ಟಿ ಹೆಣಿಯುವುದರಲ್ಲಿ ಅನುಕೂಲಕರ ಜೀವನ ನಡೆಸಲು ಸಾಧ್ಯವಿಲ್ಲವೆಂದಾಗ ಜೋಳದ ಕಣ ಮಾಡುವ ಅವಕಾಶ ಒದಗಿ ಬಂದಾಗ ಕುಶಾಲಪ್ಪ ಕೆಂಡಮಂಡಲವಾಗುವ ಪ್ರಸಂಗವಿದೆ. ಅಂದರೆ ತಳಸಮುದಾಯಗಳನ್ನು ಮೇಲಸ್ತರಗಳು ಯಾವಾಗಲೂ ತಮ್ಮ ಕಪಿಮುಷ್ಠಿಯಲ್ಲೇ ಇರಬೇಕೆಂದು ಬಯಸುತ್ತಿರುತ್ತವೆ. ತಮ್ಮ ಕೈ ತಪ್ಪಿ ಹೋಗುತ್ತಿವೆ ಎಂದಾಗ ಮತ್ತೊಂದು ಬಗೆಯ ಸಮಸ್ಯೆಯನ್ನು ತಂದಿಡುವ ಒಳಹುನ್ನಾರಗಳಿಗೆ ಕೊರವ ಸಮುದಾಯ ಶೋಷಣೆಗೆ ಬಲಿಯಾಗುತ್ತದೆ.

ಕೂಲಿ ಹೆಚ್ಚು ಮಾಡಿ ಎಂದು ಕೇಳುವಂತಿಲ್ಲ, ಹಂದಿಗೊಬ್ಬರವನ್ನು ಕೊಡುವಾಗಲು ಸ್ವಾಮಿ ನಿಷ್ಠೆಯನ್ನು ಮೆರೆಯಬೇಕು. ಕೊನೆಗೆ ಮೇಲು ಸಮುದಾಯದಗಳು ಯಾವಾಗಲೂ ತಮ್ಮ ಉದ್ಧಾರಗಳ ಮಂತ್ರಗಳನ್ನಾಗಿಯೇ ಬಳಸಿಕೊಳ್ಳಲು ಇಚ್ಛಿಸುತ್ತವೆ. ಒಂದು ವೇಳೆ ಅವು ತಮ್ಮ ಕೈ ತಪ್ಪಿ ಹೋಗುತ್ತವೆ ಎಂದಾಗ ಅಥವಾ ಸ್ವತಂತ್ರ ಬದುಕಿಗೆ ಹಾತೊರೆದಾಗ ಹೊಸ ರೀತಿಯ ಹುನ್ನಾರಗಳನ್ನು ಹೂಡಿ ಅವುಗಳನ್ನು ನಿಯಂತ್ರಿಸುತ್ತವೆ. ಕೊರವರು ದೊಡ್ಡಿಯನ್ನು ತಾವಾಗಿಯೇ ಬಿಡುವಂತೆ ವ್ಯವಸ್ಥಿತ ಸಂಚು ಮಾಡುವ ಸಂಶಾಲಪ್ಪನಂತ ಪಾತ್ರಗಳು ಸಾಮಾಜಿಕ ವ್ಯವಸ್ಥೆಯಲ್ಲಿ ಗೋಮುಖದ ಹಿಂದಿರುವ ವ್ಯಾಘ್ರನಂತೆ ಒಳ್ಳೆಯ ಮುಖವಾಡದ ಹಿಂದೆ, ಶೋಷಣೆಯ ನೈಜತೆಯನ್ನು ಮೆರೆಯುತ್ತವೆ.

ಕೊರವ ಸಮುದಾಯದಲ್ಲೂ ಒಳಜಾತಿವ್ಯವಸ್ಥೆ ಇದೆ ಎಂಬುದನ್ನು ಕ್ಷಯರೋಗದಿಂದ ಬಳಲುತ್ತಿದ್ದ ಮಾರಪ್ಪ ಹಸಿವಿನ ತೀವ್ರತೆಯಿಂದ ಕೊರವಂಜಿಗಳಿಂದ , ಹೊಲೆ ಮಾದಿಗರಿಂದ ಭಿಕ್ಷೆ ಸ್ವೀಕರಿಸಿ ತಿಂದು ಹೊಲೆರ ಹೆಣ್ಣು ಮಗಳೊಬ್ಬಳು ತಂಬಿಗೆಯಿಂದ ಸುರಿದ ನೀರನ್ನು ಕುಡಿದ ಕಾರಣಕ್ಕೆ ನ್ಯಾಯ ಪಂಚಾಯಿತಿಯನ್ನು ಮಾಡಿ ತಮ್ಮ ಊರಲ್ಲೆ ಪ್ರತಿದಿನ ಆತನ ಖಾಯಿಲೆ ಗುಣವಾಗುವವರೆಗೆ ಊಟಕೊಡುವಂತೆ ತೀರ್ಮಾನವನ್ನು ಮಾಡಲಾಗುತ್ತದೆ. ಇದರಿಂದ ತಳಸಮುದಾಯದಲ್ಲೂ ಒಳಾಡಳಿತ ವ್ಯವಸ್ಥೆಯಲ್ಲೂ ಮೇಲುಕೀಳಿನ ವರ್ಗವ್ಯವಸ್ಥೆ ಮತ್ತು ಜಾತಿ ವ್ಯವಸ್ಥೆಯ ಜೀವಂತಿಕೆಯನ್ನು ಚಿತ್ರಿಸಲಾಗಿದೆ.

ಮಳೆಗಾಲದ ಸಂದರ್ಭದಲ್ಲಿ ಒಮ್ಮೆ ಮಳೆಯ ರಭಸಕ್ಕೆ ಅಂಕುಶದೊಡ್ಡಿಯ ಕೊರವರ ಮನೆಗಳೆಲ್ಲಾ ಕಿತ್ತು ಹೋಗಿ, ಕುರಿ,ಕೋಳಿ, ಹಂದಿಗಳ ಚೀರಾಟ ಜೋರಾಗಿತ್ತು. ಮಳೆಯಿಂದ ಆಶ್ರಯ ಪಡೆಯಲು ರಾಯಪುರಕ್ಕೆ ಹೋಗಲು ಬಿಡದ ಮಳೆ ಧೋ ಎಂದು ಸುರಿಯುತ್ತಿರುವಾಗ ಕೊರವರ ಅಂಕುಶದೊಡ್ಡಿ ಮುಳುಗುವ ಸ್ಥಿತಿಯಲ್ಲಿ ದೊಡ್ಡಿ ಬಿಟ್ಟು ಜೀವ ರಕ್ಷಣೆಗಾಗಿ ಅಲ್ಲೆ ಇರುವ ಬೆಟ್ಟದ ಲಿಂಗೇಶ್ವರ ದೇವಾಲಯದೆಡೆಗೆ ಹೊರಡುತ್ತಾರೆ. ಅಲ್ಲಿರುವ ಸಾಧು ಶಂಭುಲಿಂಗ ಸ್ವಾಮಿ, ಪೂಜಾರಿ ಗುರುಲಿಂಗಸ್ವಾಮಿ ಕೊರವರ ಮಕ್ಕಳ ಹಸಿವು ನೀಗಿಸಲು ಗುಡಿಯೊಳಗಿನ ಕಾಯಿ, ಕೊಬ್ಬರಿಯನ್ನು ನೀಡುವ ಮೂಲಕ ಮಾನವೀಯ ಕಣಗಳ ಇರುವಿಕೆಯನ್ನು ವ್ಯಕ್ತಪಡಿಸುವರು. ಅಲ್ಲದೇ ಮಾರಯ್ಯನ ಖಾಯಿಲೆ

ಉಲ್ಬಣಿಸಿ ಸಾವು ಸಂಭವಿಸಿದಾಗ ಗುಡಿಯ ಹಿಂಭಾಗ, ಸಾಧು ಸಂತರ ಸಮಾಧಿಯ ಪಕ್ಕದಲ್ಲೇ ದಫನ್ ಮಾಡುವರು. ಇವೆಲ್ಲ ಮಳೆಯ ಅವಾಂತರದಿಂದ ಉಂಟಾದ ಪ್ರಸಂಗವಾದರೂ ಅದೇ ಆ ಅಂಕುಶದೊಡ್ಡಿಯ ಕೊರವರ ಬದುಕು ವಿಚಿದ್ರಗೊಳ್ಳುವಿಕೆಗೆ ದೈವದ ಶಾಪ ಕಾರಣವೆಂದು ಧಾರ್ಮಿಕ ಲೇಪನ ಹಚ್ಚುವ ಮೂಲಕ ಭಾವನಾತ್ಮಕತೆಯೊಂದಿಗಿನ ಧಾರ್ಮಿಕ ರಾಜಕಾರಣದ ಹಿನ್ನಲೆಯಲ್ಲಿ ಮೇಲ್ವರ್ಗ ಸಫಲತೆಯನ್ನು ಪಡೆದುಕೊಳ್ಳುತ್ತದೆ. ಧಾರ್ಮಿಕ ಹೆಸರಿನಲ್ಲಿ ನಡೆಯುವ ಶೋಷಣೆಯ ನೆಲೆಗಳನ್ನು ಕಾದಂಬರಿಯಲ್ಲಿ ಸೂಕ್ಷ್ಮವಾಗಿ ಸೂಚ್ಯವಾಗಿ ವಿವರಿಸುತ್ತದೆ.

ಕಾದಂಬರಿಯೊದ್ದಕ್ಕೂ ಬಳಸಿರುವ ಭಾಷೆ ಕೊರವ ಸಮುದಾಯದ ಜನಸಾಮಾನ್ಯರ ಭಾಷೆಯನ್ನೇ ಬಳಸಿಕೊಳ್ಳಲಾಗಿದೆ. ಅದಕ್ಕೂ ಮಿಗಿಲಾಗಿ ಭಾಷಾ ಮಡಿವಂತಿಕೆಯನ್ನು ಮೀರುವ ಪ್ರಯತ್ನವನ್ನು ಕಾಣುತ್ತೇವೆ. ಬೈಗುಳ ಪದಗಳ ಬಳಕೆಯನ್ನು ಕಥಾ ಸಂವಿಧಾನಕ್ಕೆ ಚ್ಯುತಿ ಬರದ ರೀತಿಯಲ್ಲಿ ಬಳಸಿಕೊಳ್ಳುವ ಮೂಲಕ ಪಾತ್ರಗಳ ಜೀವಂತಿಕೆಯನ್ನು ಉಳಿಸಿಕೊಳ್ಳಲಾಗಿದೆ. ಭಾಷೆಯ ಮೂಲಕ ತಳಸಮುದಾಯದ ಸಾಂಸ್ಕೃತಿಕ ಸಿಕ್ಕುಗಳನ್ನು ಬಿಡಿ ಬಿಡಿಯಾಗಿ ತೆರೆದಿಡುವ ಪ್ರಯತ್ನವನ್ನು ಕಾದಂಬರಿಕಾರ ಜಂಬಣ್ಣ ಮಾಡಿದ್ದಾರೆ. ಕಾದಂಬರಿಯ ಓದಿಗೆ ಭಾಷೆಯೂ ಒಂದು ಕಾರಣವಾಗಿದೆ. ತಳಸಮುದಾಯದಲ್ಲಿ ಬಳಸುವ ದೈನಂದಿನ ಬದುಕಿನ ಭಾಷೆ ಮೇಲ್ವರ್ಗದವರಿಗೆ ಕೇಳಲು ಮಡಿವಂತಿಕೆಯ ಆಚೆ ಅನ್ನಿಸಿದರೂ ತಳಸಮುದಾಯದ ಸಾಂಸ್ಕೃತಿಕ ಬದುಕು ಭಾಷೆಯ ಬಳಕೆ ಮೇಲೆ ಪರಿಣಾಮ ಬೀರುತ್ತದೆ.

ಕಾದಂಬರಿಯ ಕೊನೆ ಭಾಗದಲ್ಲಿ ಮೇಲ್ವರ್ಗದ ರಾಜಕೀಯ ಪಿತೂರಿಗೆ ಬಲಿಯಾದ ಕೊರವ ಸಮುದಾಯ ತಮ್ಮೊಳಗೆ ಒಡಕು ಉಂಟು ಮಾಡಿದವರ ಸುಳಿವು ಸಿಗದಂತೆ ರಾಜಕೀಯ ಮಾಡುವ ಸಂಶಾಲಪ್ಪ, ಯಂಕನಗೌಡ, ಕುಶಾಲಪ್ಪರಂತ ಪಾತ್ರಗಳು ಮೇಲುಗೈ ಸಾಧಿಸುತ್ತವೆ.

ಮೇಲ್ವರ್ಗದವರ ಮೆರವಣಿಗೆಯಲ್ಲಿ ಬಿಜಲಿ ಹೊರುವುದನ್ನು ತಮ್ಮ ಕಾಯಕವೆಂದು ಒಪ್ಪಿಕೊಳ್ಳುವಂತೆ ಮಾಡುವ ಹುನ್ನಾರಗಳಿಗೆ ಬಲಿಯಾಗುತ್ತಾ ಹೋಗುತ್ತಾರೆ. "ಬೆಳಕು ಹೊತ್ತವರು ಬೆಳಕಿನಡಿಯ ಕತ್ತಲಲ್ಲಿ ಮುಳುಗಿ ಹೋದರು. ಬೆಳಕು ಹೊತ್ತು ಕಪ್ಪು ದೇಹವೊಂದು ನಡುಗುತ್ತಾ ನೆಲಕ್ಕೆ ಕುಸಿದು ಬಿದ್ದ ಕುರುಮಯ್ಯನ ಪಾತ್ರದ ಮೂಲಕ ಮತ್ತೇ ಸ್ಥಾಪಿತ ಮೌಲ್ಯಗಳ ಹಿನ್ನಲೆಯಲ್ಲೇ ಯಜಮಾನ್ಯವನ್ನು ಒಪ್ಪಿಕೊಳ್ಳುವಂತೆ ಮಾಡುವ ವ್ಯವಸ್ಥೆ ಇದೆ. ಹಾಗೆ ದವಲ್ಯಾನ ಹನ್ನೆರಡು ವರ್ಷದ ಮಗ ಬಿಜಲಿಯನ್ನು ಹೊರುವ ಮೂಲಕ ಕಾದಂಬರಿ ಮುಕ್ತಾಯವಾಗುತ್ತದೆ. ಶೋಷಣೆಗೆ ಒಳಗಾದ ಸಮುದಾಯಗಳೂ ಮತ್ತೆ ಮತ್ತೆ ಸಾಮಾಜಿಕ ಅಪಮಾನಗಳನ್ನು, ಧಾರ್ಮಿಕ ಅವಹೇಳನವನ್ನು ರಾಜಕೀಯ ಕುತಂತ್ರವನ್ನು ಸಹಿಸುವುದರೊಂದಿಗೆ ಬದುಕನ್ನು ಸಾಗಿಸಬೇಕಾದ ಅನಿವಾರ್ಯತೆಯನ್ನು ತಂದೊಡ್ಡುವ ಮೇಲ್ವರ್ಗ ಸದಾ ಜಾಗೃತವಾಗಿ ಕಾರ್ಯ ನಿರ್ವಹಿಸುತ್ತಿರುತ್ತದೆ. ತಳಸಮುದಾಯಗಳನ್ನು ಸಮಾಜದ ಮುಖ್ಯವಾಹಿನಿಗೆ ತರುವ ಎಲ್ಲಾ ಬಗೆಯ ಹುನ್ನಾರಗಳ ಬಲೆಯನ್ನು ಸೂಕ್ಷ್ಮವಾಗಿ ಹೆಣೆಯುತ್ತಾ ಹೋಗುವ ಮತ್ತು ಆಯಾ ನೆಲೆಗಳಲ್ಲಿ ಶೋಷಣೆಯನ್ನು ಪೋಷಿಸುವ ಕಾರ್ಯ ನಿರಂತರವಾಗಿರುತ್ತದೆ ಎಂಬುದನ್ನು ಬಿಂಬಿಸುವಲ್ಲಿ ಕುರುಮಯ್ಯ ಮತ್ತು ಅಂಕುಶದೊಡ್ಡಿ ಕಾದಂಬರಿ ಯಶಸ್ವಿಯಾಗಿದೆ.

ಆಕರ ಗ್ರಂಥಗಳು

೧. ಕುಂ.ವಿ. ಕಾದಂಬರಿಗಳು: ಒಂದು ಅಧ್ಯಾಯನ, ಲೇ: ಮಲ್ಲಿಕಾರ್ಜುನ ಕೆ. ಜ್ಯೋತಿ ಪ್ರಕಾಶನ ಮೈಸೂರು, ವರ್ಷ:೨೦೧೧
೨. ಆಧುನಿಕತೆ ಮತ್ತು ಬಂಡಾಯ ಕಾದಂಬರಿ, ಲೇ: ತಿಪ್ಪೆಸ್ವಾಮಿ.ಜಿ.ಆರ್. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ವರ್ಷ: ೨೦೧೦
೩. ಕನ್ನಡ ಕಾದಂಬರಿಗಳಲ್ಲಿ ವರ್ಗ ಮತ್ತು ವರ್ಣ ಸಂಘರ್ಷ, ಸಂಶೋಧಕರು, ಭಂಡಾರಿ ಆರ್.ವಿ. ಪಿಎಚ್‌ಡಿ ಅಪ್ರಕಟಿತ ಮಹಾಪ್ರಬಂಧ, ಮಂಗಳೂರು ವಿಶ್ವವಿದ್ಯಾಲಯ ವರ್ಷ:೧೯೯೩
೪. ಕನ್ನಡ ಕಾದಂಬರಿಗಳಲ್ಲಿ ವರ್ಗ ಸಂಘರ್ಷ, ಸಿದ್ದನಗೌಡ ಪಾಟೀಲ ಸಂಶೋಧಕರು, ಪಿಎಚ್‌ಡಿ ಅಪ್ರಕಟಿತ ಮಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ವರ್ಷ:೧೯೯೨